


**ISSN Print:** 2394-7500
**ISSN Online:** 2394-5869
**Impact Factor:** 3.4
IJAR 2015; 1(2): 151-152
www.allresearchjournal.com
Received: 21-11-2014
Accepted: 23-12-2014

**ಬರಗೂರಪ್ಪ.**
ಕನ್ನಡ ಸಹಾಯಕ ಪ್ರಾಧ್ಯಪಕರು, ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ, ಕರ್ನಾಟಕ

# "ಸಮಷ್ಠಿ ಪ್ರಜ್ಞೆಯ ಪ್ರತೀಕವಾಗಿ ಮಾತಂಗಿ"

**ಬರಗೂರಪ್ಪ.**

**ಖಟಣಡಿಚಿಜಣಛಿಣುಠಟ**

**ಪ್ರೊ.ಅರವಿಂದ ಮಾಲಗತ್ತಿಯವರ "ಶ್ರೀ ಚಾಂಡಾಲ ಸ್ವರ್ಗಾರೋಹಣಂ"** ಕಾವ್ಯವು ಕನ್ನಡ ಕಾವ್ಯ ಪರಂಪರೆಯಲ್ಲಿ ಒಂದು ವಿಶಿಷ್ಟ ಕೃತಿಯಾಗಿದೆ. ಕಾರಣ ಪುರಾಣದ ವಸ್ತುವನ್ನು ತೆಗೆದುಕೊಂಡು ಸಮಕಾಲೀನ ಪ್ರಜ್ಞೆಯೊಂದಿಗೆ ಸಮ್ಮಿಳಿತಗೊಳಿಸಿ ಒಂದು ಪರ್ಯಾಯ ಸಂಸ್ಕೃತಿಯೊಂದರ ಹುಟ್ಟಿಗೆ ಕಾರಣವಾಗುವುದು. ಅದಕ್ಕೆ ಸೂಕ್ತವಾದ ವೈಚಾರಿಕ ಪ್ರಜ್ಞೆಯನ್ನು ಮೂಡಿಸುತ್ತಲೇ ವೈದಿಕ ಪರಂಪರೆಯೊಂದಿಗೆ ಬೆಳೆದು ಬಂದಿರುವ ನಮ್ಮ ಸಮಾಜದ ಸ್ಥಾಪಿತ ಮೌಲ್ಯಗಳನ್ನು ವಿಶ್ಲೇಷಣೆ ಮಾಡುತ್ತಲೇ ವಿಮರ್ಶೆಗೆ ಒಳಪಡಿಸುತ್ತಾ ತಮ್ಮದೇ ಆದ ಹೊಸ ಆಶೋತ್ತರಗಳೊಂದಿಗೆ ಹೊಸ ಕನಸನ್ನು ಕಾಣುವ ಕವಿ ಮಾಲಗತಿಯವರು.

ಪುರಾಣದ ವಸ್ತುವಿನ ವಿಶ್ಲೇಷಣೆಗೆ ಪುರಾಣಕ್ಕೆ ಹತ್ತಿರವಾದ ಹಳಗನ್ನಡ ಶೈಲಿಯಲ್ಲಿ ರಚಿಸುವುದರಿಂದ ನಿಜಕ್ಕೂ ಅವರು ಒಬ್ಬ ಪ್ರಯೋಗ ಶೀಲ ಕವಿ ಎನ್ನುವುದರಲ್ಲಿ ಅನುಮಾನವಿಲ್ಲ "ಶ್ರೀ ಚಾಂಡಾಲ ಸ್ವರ್ಗಾರೋಹಣಂ" ಇದು ಅರವತ್ತೆಂಟು ಪುಟಗಳ ಒಂದು ಪುಟ್ಟಕಾವ್ಯ ಇದರ ವಸ್ತು ಬ್ರಹ್ಮ ಪುರಾಣ ಹಾಗೂ ರಾಮಾಯಣದ ಬಾಲಕಾಂಡದಲ್ಲಿ ಬರುವ ತ್ರಿಶಂಕುವಿನ ಕಥೆ ಇದಕ್ಕೆ ಆಧಾರವಾಗಿದೆ.

ಕಾವ್ಯದ ನಾಯಕನಾದ ಸತ್ಯವ್ರತನ ಸಾಧನೆಯ ಹಿಂದೆ ಸಾಮಾಜಿಕವಾಗಿ ಅತ್ಯಂತ ಕೆಳಸ್ತರದ ಜಾತಿಯವಳಾದ ಮಾತಂಗಿಯ ನಿಸ್ವಾರ್ಥದ ಸಮಷ್ಠಿ ಪ್ರಜ್ಞೆಯನ್ನು ಪ್ರತಿನಿಧಿಸುವ ಕನ್ಯೆಯದು ಮಾದಿಗರ ಜಾತಿ, ಇಕ್ಷ್ವಾಕು ವಂಶದ "ತ್ರಿಶಂಕು"ವಿಗೆ ತಂದೆಯಾದ ತ್ರಯಾರುಣಿ ಇಟ್ಟ ಹೆಸರು "ಸತ್ಯವ್ರತ" ಇವನು ಪ್ರಗತಿಪರ ಆಲೋಚನೆಗಳೊಡನೆ ಪ್ರಾರಂಭದಲ್ಲಿ ಕಾಣಿಸಿದರೂ ಕಾವ್ಯದ ಮತ್ತೊಂದು ನೆಲೆಯಲ್ಲಿ ತನ್ನ ಸಾಧನೆಯನ್ನೇ ಪ್ರಧಾನವಾಗಿಸಿ ಹೆಣ್ಣೊಬ್ಬಳ ಜೀವನದ ಭವಿಷ್ಯವನ್ನು ಗೌಣವಾಗಿ ಪರಿಗಣಿಸಿದಂತಿದೆ.

ಸತ್ಯವ್ರತನಿಂದ ಮೋಹಿತಳಾಗಿ, ಗರ್ಭಿಣಿಯಾಗಿ ಅಪಮಾನಿತಳಾಗಿ ಹಿಂಸೆಯನ್ನು ಅನುಭವಿಸಿದರೂ ತಮ್ಮಿಬ್ಬರ ಸಂಬಂಧ ಸತ್ಯವ್ರತನ ಗುರಿ ಮತ್ತು ಸಾಧನೆಗೆ ಅಡ್ಡಿಯಾಗಬಾರದೆಂದು ಆ ಮುಖೇನ ತನ್ನ ಇಡೀ ಜನಾಂಗಕ್ಕೆ ಸ್ವರ್ಗ ಪ್ರವೇಶ ಲಭಿಸುವುದಾದರೆ ತಾನು ಯಾವುದೇ ತ್ಯಾಗಕ್ಕೂ ಸಿದ್ದಳೆಂಬುದನ್ನು ಮಾತಂಗಿ ತೋರಿಸಿಕೊಟ್ಟಿದ್ದಾಳೆ.

ತನ್ನ ತಂದೆ ಮತ್ತು ಕುಲಗುರು ವಶಿಷ್ಠ ಮುನಿಗಳ ಕೋಪಕ್ಕೆ ತುತ್ತಾದ ಸತ್ಯವ್ರತ ತಾನು ಯಾವುದೇ ಪಾಪಗಳನ್ನು ಮಾಡಿಲ್ಲದಿದ್ದರೂ ತನ್ನ ತಂದೆ ನೊಂದು ನುಡಿದ ಮಾತಿನಂತೆ ಅದು ರಾಜಾಜ್ಞೆಯೆಂದು ತಿಳಿದು ಸರ್ವವನ್ನು ತ್ಯಜಿಸಿ " ಚಾಂಡಾಲರೊಡಗೂಡಿ ಚಾಂಡಾಲನಾಗು" ಎನ್ನುವ ಮಾತನ್ನು ಧಿಕ್ಕರಿಸದೆ ಹೊಲಗೇರಿಗೆ ಬಂದು ಸೇರಿದ್ದರಿಂದಲೇ ಇವನಿಗೆ ಸ್ವರ್ಗ ಪ್ರವೇಶದ ನಿರಾಕರಣೆಯಾದರೆ ಇನ್ನು ಇಡೀ ಚಾಂಡಾಲ ಕುಲದವರಿಗೆ ಸ್ವರ್ಗ ಪ್ರವೇಶದ ನಿರಾಕರಣೆಯ ವಿರುದ್ದ ಹೋರಡುವ ನಾಯಕನಾಗಿ ಕಾವ್ಯದಲ್ಲಿ ಕಂಡು ಬಂದಿದ್ದಾನೆ.

ಸತ್ಯವ್ರತನು ರಾಜ್ಯವನ್ನು ತ್ಯಜಿಸಿ ಹೊಲಗೇರಿಗೆ ಬಂದ ನಂತರದಲ್ಲಿ ತ್ರಯಾರುಣಿಯನ್ನು ಮಗನ ಅಗಲಿಕೆಯು ಚಿಂತೆಗೀಡುಮಾಡಿದ್ದು ಅವನು ಸಹ ರಾಜ್ಯಕೋಶಗಳನ್ನು ತ್ಯಜಿಸಿ ತಪಸ್ಸಿಗೆ ನಡೆದದ್ದು, ನಂತರ ರಾಜ್ಯದಲ್ಲಿನ ಭೀಕರ ಬರಗಾಲ ನಿಮಿತ್ತ ಪ್ರಜೆಗಳ ಒತ್ತಾಯ ಮತ್ತು ಹಿತದೃಷ್ಟಿಯಿಂದ ತನ್ನ ರಾಜ್ಯಕ್ಕೆ ಮರಳಿದ ಸತ್ಯವ್ರತನು ತನಗೆ ಅನಾಥ ಪ್ರಜ್ಞೆ ಕಾಡಿದ ಸಂದರ್ಭದಲ್ಲಿ ಆಶ್ರಯ ನೀಡಿದ ಹೊಲಗೇರಿಗೆ ಮತ್ತೆ ಮರಳುವುದು ಮಾತಂಗಿಯ ಗರ್ಭದಲ್ಲಿ ಜನಿಸಿದ ಮಕ್ಕಳಿಗೆ ದಿಬ್ಬಣದ ವಯಸ್ಸಾದಾಗ. ಆ ಸಂದರ್ಭದಲ್ಲಿ ಮಾತಂಗಿಯ ಅಜ್ಜಿಯ ಪ್ರತಿರೋಧ ತೀರ್ವವಾಗಿರುವುದು ಅವಳ ಮಾತೃಹೃದಯದ ಪ್ರತೀಕವಾಗಿರುವುದರ ಜೊತೆಗೆ ಅರಸೊತ್ತಿಗೆಯ ದರ್ಪವನ್ನು ಪ್ರಶ್ನಿಸುವ ಸಾಮಾಜಿಕ ವ್ಯವಸ್ಥೆಯ ಕಟುನಿಂದನೆ, ತನ್ನ ಸ್ವಾಭಿಮಾನ ಹಾಗೂ ಅಧಿಕಾರದ ಶೋಷಣೆ, ಶೋಷಿತ ಸಮುದಾಯದ ಸ್ತ್ರೀಯ ಅಸಹಾಯಕತೆ ಎಲ್ಲವೂ ನಮ್ಮ ಚಿಂತನೆಯ ಹಾದಿಯಲ್ಲಿ ಒತ್ತರಿಸಿ ಬರುತ್ತವೆ.

ಪಟ್ಟಾಭಿಷೇಕಕ್ಕೆ ಪಟ್ಟದರಾಣಿಯ ಪ್ರಶ್ನೆ ಬಂದಾಗ ಅರಸೊತ್ತಿಗೆಗೆ ತಕ್ಕುದಾದ ಬೇರೆ ಹೆಣ್ಣನ್ನು ವರಿಸಿರುತ್ತಾನೆ. ನಂತರ ಒಂಟಿಯಾಗಿಯೇ ಹೊಲಗೇರಿಗೆ ಬಂದಾಗ ಅವನನ್ನು ಕಂಡ ತಕ್ಷಣ ಅವನ ವರ್ತನೆಗಳಿಂದ ನೊಂದು ಬೆಂದು ಹೋಗಿದ್ದ ಮಾತಂಗಿಯ ತಾಯಿಯಲ್ಲಿ ಸಿಟ್ಟು, ಆಕ್ರೋಶ ಅಸಹನೆ, ಅಸಹಾಯಕತೆ ಒಮ್ಮೆಲೆ ಸ್ಪೋಟಗೊಳ್ಳುತ್ತಾ ಅವನನ್ನು ಛೇಡಿಸಿ ತನ್ನ ಬಿರುನುಡಿಗಳನ್ನು ಮುಂದುವರಿಸುತ್ತಾ

"ಬಂದಿರೋ...... ಬನ್ನಿಂ ಬನ್ನಿಂ.......
ಇತ್ತ ಉಡುಗೊರೆಯಂ ಸುಂಕ ಸಹಿತ ಪಡೆಯಲ್ ಬಂದುದೋ
ನೀಂ ಪ್ರಜಾಹಿತನೋ ? ಅಲ್ತು ಪ್ರಜಾ ಕಂಟಕಂ
ನೀಂ ಕೇರಿಯಂ ತೊರೆದಾಕ್ಷಣ ಮಾತಂಗಿ ಮಡಿದಳ್!

**Correspondence**
**ಬರಗೂರಪ್ಪ.**
ಕನ್ನಡ ಸಹಾಯಕ ಪ್ರಾಧ್ಯಪಕರು, ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ, ಕರ್ನಾಟಕ

ಇಂದೇನೆಂದ್ವೆತಂದುದಿಲ್ಲಿಗೆ?
ಪೆತ್ತ ಮಕ್ಕಳಂ ಪೊತ್ತೊಯ್ಯಲು ಬಂದುದೋ?
ವಂಶದ ಕುಡಿಯಂ ಬೆಳಗಲ್ ಹರಿಶ್ಚಂದ್ರನಿಂದಾಗದೆಂಬ ಸಂದೇಹವೇಂ?
ಮೇಲ್ಜಾತಿಯೆಂಬ ಮೋಹಂ ಅದೆಂತು ಪೋಪುದು?
ಪಟ್ಟಕ್ಕೆ ಸಜಾತಿಯ ಪೆಣ್ಣೆ ಸರ್ವಸ್ವಂ

ಎಂದು ಛೇಡಿಸಿ ತನ್ನ ಬಿರುನುಡಿಗಳನ್ನು ಮುಂದುವರೆಸುತ್ತಾ

"ನಾಂ ಬಲ್ಲೆ ಅಧಿಕಾರಮಿರ್ದಡೆ ಪಿತ್ತನೆತ್ತಿಯಾಳುವುದು ಸುಲಭಂ
ಅಧಿಕಾರಂಮೆಂಬುದು ಅರಸುವುದು, ಅಂತಸ್ತು ಸ್ಥಾನಮಾನಂ ಉನ್ನತಕುಲಂ
ಅಧಿಕಾರದೊಡನಿರ್ದು ಬಣ್ಣ ಬದಲಿಪ ಗೋಸುಂಬೆಗಳ್
ಬೆಳ್ಳಂಗಿರ್ದುದೆಲ್ಲ ಪಾಲೆಂದು ನಂಬುವ ನಾಂ ಮೂಢರ್
ಸಂಕಟದ ಸಮಯದೊಳಿಲ್ಲಿ ಗೈತರಲ್ ಇದು ಸೂಳೆವನೆಯಲ್ತು"

ಮುಂತಾಗಿ ಛೇಡಿಸುತ್ತ ಸತ್ಯವ್ರತನ ಇಡೀ ವ್ಯಕ್ತಿತ್ವವನ್ನೇ ಜಾಲಾಡುತ್ತಾಳೆ. ಮೇಲಿನ ಮಾತುಗಳಲ್ಲಿ ಬದುಕಿರುವ ಮಾತಂಗಿಯನ್ನು ಮಡಿದಳ್ ಎಂದು ಅವನಿಗೆ ಹೇಳುವಾಗ ತಾಯಿ ಹೃದಯದ ನೋವಿನ ತೀವ್ರತೆಯ ಆಳ ಓದುಗರನ್ನು ಸೆಳೆಯದಿರದು ಅಲ್ಲದೆ ಅರಸನ ಪಾಲಿಗೆ ಅವಳು ಸತ್ತಂತೆ ಎನ್ನುವುದು. ಈ ಹಿಂದೆ ನೀನು ತೋರಿಸಿದ್ದ ಪ್ರೀತಿ ಮೋಹ ಕಪಟವಾದುದೇ ವಿನಃ ನೈಜವಾದುದಲ್ಲ. ನಿನ್ನ ವಂಶದ ಕೀರ್ತಿಯನ್ನು ಬೆಳಗಲು ತನ್ನ ಮಗಳ ಸೇವಕಿಯ ಮಗನಾದ ಹರಿಶ್ಚಂದ್ರನಿಂದಾಗದೆಂಬ ಸಂಶಯ ಮತ್ತು ಸ್ವಾರ್ಥದಿಂದ ಮಾತಂಗಿಯ ಮಕ್ಕಳಿಗಾಗಿ ಬಂದಿರುವೆಯಾ ಎಂದು ಪ್ರಶ್ನಿಸುತ್ತಾಳೆ.
ಮೇಲ್ಜಾತಿಯ ಮೋಹ ಸತ್ಯವ್ರತನಿಂದ ಆಂತರಿಕವಾಗಿ ದೂರವಾಗಿಲ್ಲ ಆದ್ದರಿಂದಲೇ ಅವನು ಪಟ್ಟಕ್ಕೆ ಸಜಾತಿಯ ಹೆಣ್ಣನ್ನು ಮದುವೆಯಾಗಿರುವುದು ಎಂದು ಛೇಡಿಸುತ್ತಾಳೆ. ಮುಂದುವರಿದಂತೆ ಸಂಕಟದ ಸಮಯದಲ್ಲಿ ಮಾತ್ರ ಹೊಲಗೇರಿಗೆ ಬರಲು ಇದು "ಸೂಳೆವನೆಯಲ್ತು" ಎಂದು ನೋವು ಸಂಕಟದಿಂದ ಖಂಡಿಸುತ್ತಾಳೆ. ಜೊತೆಗೆ ನಮಗೆ ಬಡತನವಿರಬಹುದಾದರೂ ಆತ್ಮ ಗೌರವದ ಶ್ರೀಮಂತಿಕೆ ಇದ್ದೇ ಇದೆ ಇತ್ಯಾದಿಯಾಗಿ ಅವನನ್ನು ಕುಟುನಿಂದನೆಯ ಮಾತುಗಳಿಂದ ನಿಂದಿಸುತ್ತಾಳೆ. ಇವೆಲ್ಲವೂ ಮಾತಂಗಿಯ ನುಡಿಗಳೇ ಎಂಬಂತೆ ನಮಗೆ ಭಾಸವಾಗುತ್ತದೆ.

"ಮಾತಂಗಿಯ ಕಂದಗಳಿಗೀಗ ದಿಬ್ಬಣದ ಕಾಲಂ" ಎಂದ ತಕ್ಷಣ ಸತ್ಯವ್ರತನು ಎನ್ನ ಕಂದಂಗಳ್, ದಿಬ್ಬಣದ ಕಾಲಂ ...... ಇದೇಂ ಪೇಳು ತಿರ್ಪೆ? ಎನ್ನ ಕಂದಂಗಳ್ ಆದೊಡೆ ಪೇಳಬಹುದಿತ್ತೆನ್ನ ಪೆಸರಂ ಅದರೋಳ್ ಅನುಮಾನವೇಕೆ?

ಇತ್ಯಾದಿಯಾದ ಮಾತುಗಳಿಂದ ಅವನಲ್ಲಿ ಉಂಟಾಗಿರಬಹುದಾದ ಸಂಶಯ ಮತ್ತು ಆಶ್ಚರ್ಯ ಅವನ ಇಡೀ ವ್ಯಕ್ತಿತ್ವವನ್ನೇ ಪ್ರಶ್ನಿಸುವಂತಿದೆ ಸಮಕಾಲೀನ ಸಂದರ್ಭದಲ್ಲಿ ಪ್ರತಿಯೊಂದಕ್ಕೂ ಹೆಣ್ಣನ್ನೇ ಸಂಶಯದ ಸುಳಿಯಲ್ಲಿ ನೋಡುವ ಪರಿಯನ್ನು ಕಾವ್ಯ ಧ್ವನಿಸುತ್ತದೆ. ಇದಕ್ಕೆ ತಕ್ಕಂತೆ ಅಷ್ಟೇ ಖಾರವಾಗಿ ಮೋಹಿಸಿದ ಪೆಣ್ಣಂ ಮರೆತವಂಗೆ ಮಕ್ಕಳ ಮರೆವು ಪಿರಿದೇ ? ಎನ್ನುವ ಬಿರು ನುಡಿಗಳ್ ಇಡೀ ಪುರುಷ ಸಮಾಜವನ್ನೇ ಅನುಮಾನದಿಂದ ನೋಡುವಂತಿದೆ.
ಗರ್ಭಿಣಿಯಾದ ಮಾತಂಗಿ ತನ್ನ ತಂದೆಯೊಡನೆ ಸತ್ಯವ್ರತನನ್ನು ಕಾಣಲು ಅರಮನೆಗೆ ಹೋದರೆ ಅಲ್ಲಿಯ ದ್ವಾರ ಪಾಲಕರಲ್ಲಿ ನಾನ ವಿಧವಾಗಿ ಬೇಡಿದರೂ ಪ್ರವೇಶ ನಿರಾಕರಿಸಿದ್ದಲ್ಲದೆ ಅವಳ ಮತ್ತು ರಾಜನ ವಿಷಯವನ್ನು ಕುರಿತಂತೆ

ನೀಂ ಮಡದಿಯೋ.................?
ಕಟ್ಟಿಕೊಂಡವಳೋ ಮೇಣ್ ಇಟ್ಟು ಕೊಂಡವಳೋ?
ಉದರದೊಳಿರ್ಪ ಕೂಸು ಎಮ್ಮರಸರದೋ ಮೇಣ್
ಇರುಳರಸರದೋ......?

ಎಂದು ಹಾಸ್ಯ ಮಾಡುವ ಸಂದರ್ಭ ತುಂಬಾ ಖೇದ ವೆನಿಸುತ್ತದೆ. ಮುಂದುವರಿದಂತೆ

'ಓ ದ್ವಾರಪಾಲಕರೇ ಬನ್ನಿಂ! ಬನ್ನಿಂ!
ಮಹಾರಾಣಿಯರ್ ಬಂದಿರ್ಪರೆ ಓ...........
ವೇಣ್ ಛತ್ರ ಚಾಮರಂಗಳಂ ತನ್ನಿಂ.......
ಚಾಂಡಾಲಗಿತ್ತಿಗೂ ಚಾಮರದ ಮೋಹಂ
ಪಟ್ಟದರಸಿಯಾಗಿ ಮೆರೆವ ಬಯಕೆ ....... ಎನ್ನುತ್ತಾ

ತೀವ್ರವಾದ ಕುಹಕ ನುಡಿಗಳಿಂದ ಅವಮಾನಿಸುತ್ತಾರೆ. ಇದು ಒಂದೆಡೆಯಾದರೆ ಹಳ್ಳಕ್ಕೆ ಬಿದ್ದಾಗ ಆಳಿಗೊಂದು ಕಲ್ಲು ಎಂಬಂತೆ ದಲಿತ ಕೇರಿ ಇಡೀ ಸಮಾಜ ಅವಳನ್ನು ಕೆಟ್ಟ ದೃಷ್ಟಿಯಲ್ಲಿ ನೋಡುವ ಮತ್ತು ನೋಯಿಸುವ ರೀತಿ ಕೊನೆಗೆ ಪೊಲಗೇರಿ ಸಮಾಜವೆಲ್ಲ ಸದರಿ ಗರ್ಭವನ್ನು ಹೊರಹಾಕುವಂತೆ ಬಲತ್ಕರಿಸಿದರೂ ಮಾತಂಗಿ ಅದನ್ನು ನಿರಾಕರಿಸುತ್ತಾ ಅವಮಾನವನ್ನು ಹೊತ್ತೇ ಜೀವಿಸುತ್ತಾಳೆ. ಇದು ಮಾತಂಗಿಯ ಜೀವನದ ವ್ಯಥೆಯಾದರೆ ಮತ್ತೊಂದೆಡೆ ಸತ್ಯವ್ರತನ ರಾಜಸಭೆಯಲ್ಲಿ ವ್ಯಕ್ತವಾದ
"ಕಾಕ ಗೊರವಂಕ ಕೊಕ್ಕರೆ ಪಾರಿವಾಳಗಳೋಳ್ ಕಾಕ ಚಂಡಾಲರ್ಗೆ ಸಮೆಂ. ಕಾಕಂಗೆ ಸಗ್ಗಂ ದಕ್ಕದೆಂಬರ್"– ಎನ್ನುವ ಸ್ವಾರ್ಥ ಧರ್ಮ ನೀತಿಜ್ಞರ ಮಾತುಗಳಿಂದ ನೊಂದ ರಾಜನಾದ ಸತ್ಯವ್ರತ ಸಮಾಜದ ವ್ಯವಸ್ಥೆಯನ್ನೇ ಧಿಕ್ಕರಿಸುತ್ತಾ ತಾನು ರಾಜನಾಗಿದ್ದು 'ಅನೆಷ್ಟು ಅಸಹಾಯಕಂ'–ಎಂದು ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಾ ತಾನು ಸಶರೀರವಾಗಿ ಸ್ವರ್ಗಕ್ಕೆ ಹೋಗಿ ಚಂಡಾಲರಿಗೂ ಸ್ವರ್ಗದ ಪ್ರವೇಶಕ್ಕೆ ಹೋರಾಡುವುದಾಗಿ ಪ್ರತಿಜ್ಞೆ ಮಾಡಿ ರಾಜ್ಯಕೋಶಗಳನ್ನು ತ್ಯಜಿಸಿ ತನ್ನ ಸಾಧನೆಗೆ ಮುಂದಾಗಿ ಮಾತಂಗಿಯ ದರ್ಶನಕ್ಕೆ ಪೊಲಗೇರಿಗೆ ಬಂದಾಗ ಈ ಹಿಂದಿನಂತೆ ಮಾತಂಗಿಯ ತಾಯಿಯ ಕಟುನುಡಿಗಳನ್ನು ಎದುರಿಸುವುದು ಅವನಿಗೆ ಅನಿವಾರ್ಯವಾದರೂ ಮಾತಂಗಿ ಮಾತ್ರ ಅವನನ್ನು ನಿಂದಿಸಲಾರಳು. ಬದಲಾಗಿ ಅವನಲ್ಲಿ ತಾಯಿಯ ಬಿರುನುಡಿಗಳಿಗಾಗಿ ಕ್ಷಮೆಯಾಚಿಸುತ್ತಾಳೆ.
ಇನ್ನು ತನ್ನ ತಪ್ಪಿಗೆ ಕ್ಷಮೆಯಾಚಿಸಿದ ಸತ್ಯವ್ರತನು ಮಾತಂಗಿ ನೀಡುವ ಯಾವುದೇ ಶಿಕ್ಷೆಗೆ ಸಿದ್ಧ ಎಂಡು ನಿವೇದಿಸಿದ ಸಂದರ್ಭದಲ್ಲಿ "ನಿಮ್ಮ ಮನುಕುಲಂ ಮಾರ್ಗಂ ಬರಿ ಗಂಡುಗಳಿಗಲ್ತು, ಪೆಣ್ಣುಗಳಿಗೂ ಅಕ್ಕುಂ ಮುಕ್ತಿ ಮಾರ್ಗಂ...........ಎನ್ನುವ ಮಾತಂಗಿ ನುಡಿಗಳು ಸಮಕಾಲೀನ ಸ್ತ್ರೀ ಸಂವೇದನೆಯ ಆಶಯಗಳನ್ನು ಧ್ವನಿಸುತ್ತದೆ. ಮುಂದುವರೆದಂತೆ

"ನಿಮ್ಮ ಸತಿತನಕಿಂ ಎನಗೆ
ಮಹಾಮನುಕುಲ ಧರ್ಮದೆಸೆಗೆ ಸಂಘರ್ಷಮಂ ಗೈದಿರ್ಪ
ಸಗ್ಗಿಗಿನ ಸತಿಯೆಂಬ ನಾಮದಿಂ ಕರೆಯಿಸಿಕೊಂಬ ಬಯಕೆ
ನಿಮ್ಮ ಧ್ಯೇಯಮೇ ಎನ್ನ ಧ್ಯೇಯಂ
ತೊಟ್ಟ ಧ್ಯೇಯಮಂ ಮಾಣದೆ ಪೂರೈಸಿ....."

ಎಂದು ತನ್ನ ಬಾಳಸುಖವನ್ನೇ ತ್ಯಜಿಸಿ ವ್ಯಷ್ಠಿ ಪ್ರಜ್ಞೆಗಿಂತ ಸಮಷ್ಠಿ ಪ್ರಜ್ಞೆಯನ್ನು ಪ್ರಧಾನವನ್ನಾಗಿಸ್ತಿದೆ. ಮಾತಾಗಿ ಕ್ಷಮಾ ಮೂರ್ತಿಯಾಗಿ ಸಾಧಕನಿಗೆ ಸಾಧನೆಯ ದೀಪವಾಗಿ ಮುಂದೆ ಸತ್ಯವ್ರತ ಪ್ರತಿ ಸ್ವರ್ಗದ ಸೃಷ್ಠಿಯ ನಾಯಕನಾಗುವಲ್ಲಿ ಅವಳ ಸಹಕಾರ ಮತ್ತು ತ್ಯಾಗ ಪ್ರಶಂಶಾರ್ಹವಾದುದು.
ಹೀಗೆ ಅರವಿಂದ ಮಾಲಗತ್ತಿಯವರು ದಲಿತೇತರ ನಾಯಕ ನೊಬ್ಬನಿಂದ ದಲಿತ ಹಾಗೂ ಸ್ತ್ರೀ ಸಂವೇದಿ ನೆಲೆಯಲ್ಲಿ ಪ್ರತಿ ಸ್ವರ್ಗದ ಸೃಷ್ಠಿಯ ಕಲ್ಪನೆಯನ್ನು ಈ ಕಾರ್ಯದಲ್ಲಿ ಕಟ್ಟಿ ಕೊಟ್ಟಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಸಂ. ಅರ್ಜುನ ಗೊಳಸಂಗಿ–ದಲಿತಜ್ಞ (2000),ದಲಿತ ಸಾಹಿತ್ಯ ಪರಿಷತ್ತು ಗದಗ
2. ಡಾ.ಕೆ.ಆರ್. ದುರ್ಗದಾಸ– ದಲಿತಜ್ಞಕೃತಿಯ ಲೇಖನ
3. ಡಾ.ಎಸ್.ಡಿ.ಶಶಿಕಲಾ– ಪಗಡಿಯ ಕೌದಿಯಲಿ ದೀಪಗಳು ಬೆಳಗಿ (2015), ಮೈಸೂರು.ವಿ.ವಿ
4. ಡಾ. ಅ. ಮಾಲಗತ್ತಿ–ಸೀಮಾತೀತ ವಿಮರ್ಶೆ (2012), ಪೂಜಾ ಪ್ರಕಾಶನ ಮೈಸೂರು
5. ಡಾ.ಎನ್.ಎಸ್.ಶಂಕರೇಗೌಡ–ಅ.ಮಾಲಗತ್ತಿಯವರ ಸಾಹಿತ್ಯ ಮತ್ತು ಚಿಂತನೆ